**1ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಾಗರ**

**ಸಿ.ಸಿ ಸಂಖ್ಯೆಃ 1207-2022**

**ಸಿ.ಡಬ್ಲ್ಯೂ -2, ಪಿ.ಡಬ್ಲ್ಯೂ -2**

| | | |
|---|---|---|
| ಸಾಕ್ಷಿದಾರರ ಹೆಸರು | : | ಗೀತ |
| ಗಂಡನ ಹೆಸರು | : | ಕೃಷ್ಣ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸ | : | ಹಲಸಿನ ಕೊಪ್ಪ ಗ್ರಾಮ, ಸೊರಬ ತಾಲ್ಲೂಕು. |

**ಪ್ರಮಾಣೀಕರಿಸಿದ ದಿನಾಂಕ : 09.06.2026.**

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರಿಂದ**

1. ಚಾಸ 1 ನನ್ನ ತಾಯಿ. ಚಾಸ 3 ನನ್ನ ತಮ್ಮ. ಚಾಸ 6 ನನ್ನ ಅಕ್ಕ. ಚಾಸ 4 ಮತ್ತು 5 ನಮ್ಮ ಊರಿನವರು. ಆರೋಪಿತರ ಪರಿಚಯವಿಲ್ಲ. ದಿಃ09.05.2022 ರಂದು 1ನೇ ಆರೋಪಿ ಚಾಸ 6 ರವರ ಬಳಿ ಗಲಾಟೆ ಮಾಡಿದ್ದರು. ಆ ಗಲಾಟೆಯ ಕಾರಣ ಮಹಜರ್ ಗೆಂದು ಪೊಲೀಸರು ದಿಃ10.05.2022 ರಂದು ಮಂಕಳಲೆ ಗ್ರಾಮದ ಗಲಾಟೆ ಆದ ಜಮೀನಿನ ಬಳಿ ಬಂದಿದ್ದರು. ಮಹಜರ್ ಗೆಂದು ನಾನು, ನನ್ನ ತಾಯಿ ಚಾಸ 1, 3, 4,5 ಮತ್ತು 6 ಹೋಗಿದ್ದೆವು. ಮಹಜರ್ ಮುಗಿದ ನಂತರ ನಾವು ಹಿಂತಿರುಗಿ ಎಲ್ಲರೂ ಹೋಗುತ್ತಿದ್ದೆವು. ಆಗ ನಾನು ಮೂತ್ರ ವಿಸರ್ಜನೆಗೆಂದು ಹೋದೆ. ಚಾಸ 3 ರಿಂದ 6 ರವರು ಮುಂದೆ ಹೋದರು. ನನ್ನ ತಾಯಿ ಚಾಸ 1 ನನ್ನನ್ನು ಕಾಯುತ್ತಾ ನಿಂತಿದ್ದರು. ಆಗ ಆರೋಪಿತರು ಮಟ್ಟಿ ಸಂದಿಯಲ್ಲಿ ಅಡಗಿಕೊಂಡಿದ್ದವರು ಬಂದು ಏತಕ್ಕೆ ಬಂದಿದ್ದೀರಿ ಎಂದು ನನಗೆ ಹೊಡೆದರು. ನೀವು ನಮ್ಮ ಜಮೀನಿಗೆ ಬಂದರೆ ನಿಮ್ಮನ್ನು ಜೀವ ಸಹಿತ ಬಿಡುವುದಿಲ್ಲವೆಂದು ನನಗೆ ಬೆನ್ನಿಗೆ, ಸೊಂಟಕ್ಕೆ, ಕೈಗೆ ಹೊಡೆದರು ಹಾಗೂ ನನ್ನ ತಾಯಿಗೂ ಸಹ ಹೊಡೆದರು. ನಾನು ಚೀರಾಡುವುದನ್ನು ಕೇಳಿ ಚಾಸ 3 ರಿಂದ 6 ಬಂದರು. ಆಗ ಆರೋಪಿತರು ಅಲ್ಲಿಂದ ಓಡಿ ಹೋದರು.

2. ನಂತರ ನನ್ನನ್ನು ಮತ್ತು ಚಾಸ 1 ರವರನ್ನು, ಚಾಸ 3 ಮತ್ತು 6 ರವರು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಸೇರಿಸಿದರು. ಆಸ್ಪತ್ರೆಯಲ್ಲಿ ನಾವು 15 ದಿವಸ ಇದ್ದೆವು. ಆ ದಿನ ನನಗೆ ಮತ್ತು ಚಾಸ 1 ರವರಿಗೆ ಹೊಡೆದ ಆರೋಪಿತರು ಈ ದಿನ ನ್ಯಾಯಾಲಯದ ಮುಂದೆ ಆರೋಪಿತರ ಸ್ಥಾನದಲ್ಲಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯು ದಂಡ ಪ್ರಕ್ರಿಯಾ ಸಂಹಿತೆ ಕಲಂ 161 ರ ಹೇಳಿಕೆಗೆ ಭಾಗಶಃ ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿದ್ದರಿಂದ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಕೋರಿಕೊಂಡಿರುತ್ತಾರೆ. ಕಡತಗಳನ್ನು ಪರಿಶೀಲಿಸಿ ಆಲಿಸಿ ಅನುಮತಿಯನ್ನು ನೀಡಲಾಯಿತು.)

**<u>ಪಾಟೀ ಸವಾಲುಃ- ಸ.ಸ.ಅ. ರವರಿಂದಃ-</u>**

1. ಆರೋಪಿತರು ನನಗೆ ಹಾಗೂ ಚಾಸ 1 ರವರಿಗೆ ದೊಣ್ಣೆಯಿಂದ ಹೊಡೆದಿರುತ್ತಾರೆ ಎಂದರೆ ಸರಿ. ಆರೋಪಿತರು ನನ್ನನ್ನು ಮತ್ತು ಚಾಸ 1 ರವರನ್ನು ಅಡ್ಡಗಟ್ಟಿ ತಡೆದಿರುತ್ತಾರೆ ಎಂದರೆ ಸರಿ. ಈಗ ನೋಡುತ್ತಿರುವ ದೊಣ್ಣೆಯಿಂದಲೇ ಆರೋಪಿತರು ನನಗೆ ಹಾಗೂ ಚಾಸ 1 ರವರಿಗೆ ಹೊಡೆದಿರುತ್ತಾರೆ ಎಂದರೆ ಸರಿ. ಸಾಕ್ಷಿಯು ದೊಣ್ಣೆಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ಮುದ್ದೆ ಮಾಲು 1 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಆರ್.ಹೆಚ್.ಬಿ. ವಕೀಲರಿಂದಃ-</u>**

1. ನಮಗೆ ಮಂಕಳಲೆ ಗ್ರಾಮದಲ್ಲಿ 2 ಎಕರೆ ಜಮೀನು ಇರುತ್ತದೆ. ಆ 2 ಎಕರೆ ಜಮೀನಿನ ಮೇಲ್ಭಾಗದಲ್ಲಿ 4 ಎಕರೆ ಜಮೀನು ಇರುತ್ತದೆ. ನಮಗೂ ಮತ್ತು 1ನೇ ಆರೋಪಿಗೂ ಜಮೀನಿಗೆ ಸಂಬಂಧಿಸಿದಂತೆ ವ್ಯಾಜ್ಯವಿರುತ್ತದೆ ಎಂದರೆ ಸರಿ. ಸೊಪ್ಪಿನ ಬೆಟ್ಟದ ವಿಸ್ತೀರ್ಣ ನನಗೆ ಗೊತ್ತಿಲ್ಲ. 1ನೇ ಆರೋಪಿ ನಮ್ಮ ಜಮೀನಿನ ತಲೆಕಟ್ಟಿನಲ್ಲಿ ಕೃಷಿ ಮಾಡುತ್ತಿದ್ದಾರೆಂದರೆ ಸರಿಯಲ್ಲ. ನಮ್ಮ ಮನೆಯಿಂದ ಜಮೀನು 1 ಕಿ ಮೀ ಅಂತರದಲ್ಲಿರುತ್ತದೆ. 1ನೇ ಆರೋಪಿ ತನ್ನ ತಂದೆಯ ಕಾಲದಿಂದಲೂ ತೋಟ ಮಾಡಿರುತ್ತಾನೆ ಎಂದರೆ ಸರಿಯಲ್ಲ. ದೂರನ್ನು ನೀಡುವಾಗ 3 ಜನ ಹೊಡೆಯಲು ಬಂದಿದ್ದರು ಎಂದು ದೂರನ್ನು ನೀಡಿರುತ್ತೇವೆ ಎಂದರೆ ಸರಿ.

2. ಈ ಘಟನೆ ಆದ ದಿನ ನಾವು ಮನೆಯನ್ನು ಬಿಟ್ಟಾಗ ಸಮಯ ಬೆಳಿಗ್ಗೆ 11 ಗಂಟೆಯಾಗಿತ್ತು. ಪೊಲೀಸರು ಸ್ಥಳಕ್ಕೆ ಬೆಳಿಗ್ಗೆ 11 ಗಂಟೆಗೆ ಬಂದರು. ಪೊಲೀಸರು ಸಂಜೆ 4.30 ಕ್ಕೆ ಮಹಜರ್ ಮುಗಿಸಿ ಹೋದರು. ಪೊಲೀಸರಿಗೆ ಸ್ಥಳವನ್ನು ಚಾಸ 3 ತೋರಿಸಿದರು.

ಪೊಲೀಸರು ಚಾಸ 3 ರವರ ಸಹಿಯನ್ನು ಪಡೆದರೋ ಇಲ್ಲವೋ ನನಗೆ ಗೊತ್ತಿಲ್ಲ. 5-6 ಜನ ಪೊಲೀಸರು ಬಂದಿದ್ದರು. ಮಹಿಳಾ ಪೊಲೀಸರು ಯಾರೂ ಬಂದಿರಲಿಲ್ಲ. ಪೊಲೀಸರು ಯಾವುದರಲ್ಲಿ ಬಂದರು ನಮಗೆ ಗೊತ್ತಿಲ್ಲ. ಪೊಲೀಸರು ಮೊದಲು ಕರೆ ಮಾಡಿ ನಂತರ ಬಂದರು. ಆ ದಿನ ನಾವು ಸುಮಾರು 4 ಜನ ಹೋಗಿದ್ದೆವು. ಆ ದಿನ ಪೊಲೀಸರು ನನ್ನ ಸಹಿಯನ್ನು ಪಡೆದುಕೊಳ್ಳಲಿಲ್ಲ. ಆ ದಿನ ಪೊಲೀಸರು ನನ್ನ ತಮ್ಮನ ಸಹಿಯನ್ನು ಏಕೆ ಪಡೆದುಕೊಂಡರು ಎಂದು ನನಗೆ ಗೊತ್ತಿಲ್ಲ.

3. ನಾವು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸ್ ಠಾಣೆಗೆ 2 ಬಾರಿ ಹೋಗಿರುತ್ತೇವೆ. ಆ 2 ಬಾರಿಯಲ್ಲಿ 1 ಬಾರಿ ಪೊಲೀಸರು ನನ್ನ ಸಹಿಯನ್ನು ಪಡೆದುಕೊಂಡರು. 1ನೇ ಆರೋಪಿ ಮತ್ತು ನಮ್ಮ ಕುಟುಂಬದ ನಡುವೆ ಜಮೀನಿನ ವ್ಯಾಜ್ಯಕ್ಕೆ ಸಂಬಂಧಿಸಿದಂತೆ ಮನಸ್ತಾಪ ಇರುತ್ತದೆ. ನಾವು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂಜೆ 6 ಗಂಟೆಗೆ ಪೊಲೀಸ್ ಠಾಣೆಗೆ ಹೋಗಿದ್ದೆವು. 6 ಗಂಟೆಗೆ ನಾವು ಹೋಗಿದ್ದಾಗ ಪೊಲೀಸರು ಠಾಣೆಯಲ್ಲಿ ದೂರನ್ನು ಪಡೆಯಲಿಲ್ಲ, ಆಸ್ಪತ್ರೆಗೆ ಬಂದು ಪಡೆದುಕೊಂಡರು. ದೂರನ್ನು ನನ್ನ ತಾಯಿ ಚಾಸ 1 ನೀಡಿದರು. ನನ್ನ ತಾಯಿ ಸಂಜೆ 6 ಗಂಟೆಗೆ ದೂರನ್ನು ನೀಡಿದರು. ಆ ದಿನ ನಾವು ಆಸ್ಪತ್ರೆಗೆ 3 ಜನ ಹೋಗಿದ್ದೆವು. ನಾವು ಆಟೋದಲ್ಲಿ ಆಸ್ಪತ್ರೆಗೆ ಹೋದೆವು.

4. ನಮ್ಮ ಖಾತಾ ಜಾಗದಿಂದ ಘಟನಾ ಸ್ಥಳ 200 ಮೀಟರ್ ಅಂತರದಲ್ಲಿರುತ್ತದೆ. ನಮ್ಮ ಜಮೀನಿನ ಬಳಿ ಅಡಿಕೆ ಕಾಲು ಸಂಕ ಇರುತ್ತದೆ ಎಂದರೆ ಸರಿ. ಕಾಲು ಸಂಕವು ಎಷ್ಟು ಆಳವಿದೆ ಎಂದು ನನಗೆ ಗೊತ್ತಿಲ್ಲ. ಸದರಿ ಕಾಲು ಸಂಕವು ಮೇ-ಜೂನ್ ತಿಂಗಳಿನಲ್ಲಿ ಮಳೆಗಾಲ ಇದ್ದ ಕಾರಣ ಜಾರುತ್ತದೆ ಎಂದರೆ ಸರಿ. ಆರೋಪಿತರು ನಮ್ಮನ್ನು ಅಡ್ಡಗಟ್ಟಿ ದೊಣ್ಣೆಯಿಂದ ಹೊಡೆದಿರುತ್ತಾರೆ ಎಂದು ಹಾಗೂ ಜೀವ ಬೆದರಿಕೆ ಹಾಕಿರುತ್ತಾರೆಂದು ಸುಳ್ಳು ಸಾಕ್ಷಿ ನುಡಿಯು ತ್ತಿದ್ದೇನೆಂದರೆ ಸರಿಯಲ್ಲ. ಕಾಲು ಸಂಕದಲ್ಲಿ ಜಾರಿ ನಾನು ಮತ್ತು ನನ್ನ ತಾಯಿ ಪೆಟ್ಟು ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. 1ನೇ ಆರೋಪಿಯ ತಾಯಿಗೆ ನಾವು ಹೊಡೆದ ಕಾರಣ ಅವರು ದೂರು ನೀಡಿದರು ಎಂಬ ಕಾರಣದಿಂದ ನಾವು ಮತ್ತೊಂದು ದೂರನ್ನು ನೀಡಬೇಕೆಂದು ಈ ದೂರನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರನ್ನು ಅಡಿಕೆ ತೋಟದಿಂದ ವಕ್ಕಲೆಬ್ಬಿಸುವ ಉದ್ದೇಶದಿಂದ ಸುಳ್ಳು ದೂರನ್ನು ಸಲ್ಲಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಸೊಪ್ಪಿನ ಬೆಟ್ಟದ ಮಂಜೂರಾತಿಯನ್ನು ಯಾರಿಗೂ ನೀಡುವುದಿಲ್ಲ ಎಂದರೆ ಸರಿ.

ಗಲಾಟೆ ಆಗದಿದ್ದರೂ ಗಲಾಟೆ ಆಗಿದೆ ಎಂದು ಸುಳ್ಳು ದೂರನ್ನು ನೀಡಲಾಗಿರುತ್ತದೆ ಎಂದರೆ ಸರಿಯಲ್ಲ.

5. ಮುದ್ದೆ ಮಾಲು 1 ರಂತಹ ದೊಣ್ಣೆ ನಮ್ಮ ಊರಿನಲ್ಲಿ ಸಾಕಷ್ಟು ದೊರೆಯುತ್ತವೆ ಎಂದರೆ ಸರಿ. ದೊಣ್ಣೆಯ ಮೇಲೆ ಪೊಲೀಸರು ನಮ್ಮ ಸಹಿಯನ್ನು ಪಡೆದುಕೊಂಡಿರುವುದಿಲ್ಲ. ಯಾವುದೇ ಗಲಾಟೆ ಆಗದಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ನನ್ನ ಸಾಕ್ಷ್ಯ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಷಯಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ಆರೋಪಿತರಿಗೂ ಮತ್ತು ಮುದ್ದೆ ಮಾಲು 1 ಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)**

**ಓದಿ ಹೇಳಿ ಕೇಳಿ ಸರಿ ಇದೆ**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು, ಸಾಗರ.**